ಸರಕಾರ ಈ ಸಮಿತಿಯ ಕಾರ್ಯವನ್ನು ಪೂರೈಸುವುದೇ? ಪೂರೈಸುವುದಾದರೆ ಯಾವಾಗ? ಇಲ್ಲವೆ ಪೂರ್ತಿಯಾಗಿ ಕೈಬಿಡಲಾಗಿದೆಯೇ? ಯಾವುದಕ್ಕೂ ಸರಕಾರ ಸರಿಯಾದ ಹೇಳಿಕೆಯನ್ನು ನೀಡಬೇಕೆಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು): ಮಾನ್ಯ ಉಪಾಧ್ಯಕ್ಷಣೆಯವರೇ,

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂದು ಅಥವಾ ಈಗಾಗಲೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಲ್ಲಿ ಇರುವ ಜಾತಿಗಳ ಸಮಾನ ಜಾತಿಯೆಂದು ಪರಿಗಣಿಸಬೇಕೆಂದು, ಕೋರಿ ಹಲವಾರು ಜಾತಿಗೆ ಸೇರಿದೆ ಜನರು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಹಾಗೂ, ಇನ್ನೂ ಸಲ್ಲಿಸುತ್ತಲೂ ಇದ್ದಾರೆ. ಈ ಮನವಿಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ನೇಮಿಸಿದ ಸಮಿತಿಯನ್ನು ದಿನಾಂಕ 5-1-91ರಲ್ಲಿ ಆಗಿನ ಕಾನೂನು ಸದಸ್ಯರು, ವಿಧಾನ ಸಭಾ ಮತ್ತು ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಇತರ ಗಣ್ಯ ವ್ಯಕ್ತಿಗಳನ್ನು ಒಳಗೊಂಡಂತೆ ಪುನರ್ ರಚಿಸಲಾಯಿತು. ಈ ಸಮಿತಿಗೆ ಪೂರಕವಾಗಿ 3 ಉಪ ಸಮಿತಿಗಳನ್ನು ರಚಿಸಲಾಗಿದೆ. ಮಾಲೆಯರು ಮತ್ತು ಮಲೆಯರು ಜಾತಿ ಬಗ್ಗೆ ಶ್ರೀ ಕಾಗೋಡು ತಿಮ್ಮಪ್ಪ ಇವರ ಅಧ್ಯಕ್ಷತೆಯಲ್ಲಿಯೂ, ಕುರುಬ, ಜೇನು ಕುರುಬ, ಕಾಡುಕುರುಬ ಜಾತಿ ಬಗ್ಗೆ ಶ್ರೀ ಶ್ರೀನಿವಾಸಪ್ರಸಾದ್, ಲೋಕಸಭಾ ಸದಸ್ಯರು ಇವರ ಅಧ್ಯಕ್ಷತೆಯಲ್ಲಿಯೂ ಹಾಗೂ ಇತರ ಜಾತಿಗಳ ಬಗ್ಗೆ ಶ್ರೀ ಡಿ.ಕೆ. ನಾಯ್ಕರ್, ಲೋಕಸಭಾ ಸದಸ್ಯರು, ಇವರ ಅಧ್ಯಕ್ಷತೆಯಲ್ಲಿಯೂ, ಕ್ರಮವಾಗಿ ಮೂರು ಉಪ ಸಮಿತಿಗಳನ್ನು ರಚಿಸಲಾಗಿದೆ.

ಈ ಮೂರು ಉಪ ಸಮಿತಿಗಳನ್ನು ವಿವಿಧ ಜಾತಿ ಮತ್ತು ಪಂಗಡಗಳು ಪ್ರಮುಖವಾಗಿ ನೆಲೆಸಿರುವ ಸ್ಥಳಗಳಿಗೆ ಭೇಟಿ ಮಾಡಿ, ಮಾಹಿತಿ ಸಂಗ್ರಹಿಸಿ, ಕೂಲಂಕುಷ ಅಧ್ಯಯನ ನಡೆಸಿ, ಶೀಘ್ರವಾಗಿ ಒಂದು ವರದಿಯನ್ನು ಮುಖ್ಯ ಸಮಿತಿಗೆ ಸಲ್ಲಿಸಲು ಕೋರಲಾಗಿತ್ತು. ಈ ಬಗ್ಗೆ ಶ್ರೀ ಡಿ.ಕೆ. ನಾಯ್ಕರ್ ಅವರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯು ದಿನಾಂಕ 19-4-92ರಂದು ತನ್ನ ವರದಿಯನ್ನು ಸಲ್ಲಿಸಿದೆ. ಇನ್ನೆರಡು ಉಪ ಸಮಿತಿಗಳು ತಮ್ಮ ವರದಿಗಳನ್ನು ಸಲ್ಲಿಸಿಲ್ಲ. ಕಳೆದ 2 ವರ್ಷಗಳಲ್ಲಿ ಮುಖ್ಯ ಸಮಿತಿಯು ಮೂರು ಬಾರಿ ಸಭೆ ಸೇರಿದ್ದು, ಉಪ ಸಮಿತಿಗಳು 7 ಬಾರಿ ಸಭೆಸೇರಿವೆ. ಮತ್ತು ಈ ಸಮಿತಿಯ ಸಮಿತಿಗಳ ಮುಂದೆ ಸುಮಾರು 80 ಜಾತಿಗಳವರು ತಮ್ಮನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಈಗ ಹೊಸ ಮಂತ್ರಿ ಮಂಡಲ ರಚಿತವಾಗಿರುವುದರಿಂದ, ಈ ಸಮಿತಿಯನ್ನು ಪುನರ್ ರಚಿಸಬೇಕಾಗಿದೆ. ಆದುದರಿಂದ, ಈ ಸಮಿತಿಯನ್ನು ಪುನರ್ ರಚಿಸಿ, ಸಮಿತಿಯ ಸಭೆ ಯನ್ನು ಕೂಡಲೇ ಕರೆಯುವ ವಿಪ್ಪಾಡು ಮಾಡಿ, ಸರ್ಕಾರಕ್ಕೆ ವರದಿ ಸಲ್ಲಿಸಲು ಕೋರಲಾಗುವುದು. ಸಮಿತಿಯುಸರ್ಕಾರಕ್ಕೆ ಸಲ್ಲಿಸುವ ವರದಿಯನ್ನು ಪರಿಶೀಲಿಸಿ, ಅರ್ಹವೆಂದು ಕಂಡು ಬಂದ ಜಾತಿಗಳನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳೆಂದು ಪರಿಗಣಿಸಲು ಕೇಂದ್ರ ಸರ್ಕಾರಕ್ಕೆಪ್ರಸ್ತಾವನೆ ಕಳುಹಿಸಿಕೊಡಲಾಗುವುದು.

8. ಗಂಗೊಳ್ಳಿ ಮೀನುಗಾರಿಕಾ ಸಹಕಾರಿ ಸಂಘದಿಂದ ಸೀಮೆ ಎಣ್ಣೆ ವಿತರಣೆಗೆ ಒತ್ತಾಯ

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಉಪಾಧ್ಯಕ್ಷಣೆಯವರೆ, ಜೀವದ ಹಂಗು ತೊರೆದು ಕಡಲಲ್ಲಿ ಮೀನು ಹಿಡಿಯುವ ಬಡ ಮೀನುಗಾರರು ಸಾಲಮಾಡಿ ನಾಡ ದೋಣಿ ಪಡೆದರು.. ಬದುಕಿಗಾಗಿ ಕಷ್ಟಪಟ್ಟು ದುಡಿದರು. ನಾಡದೋಣಿಗಳಿಗೆ ಕಡಿಮೆ ದರದಲ್ಲಿ ಸೀಮೆಎಣ್ಣೆ ಸರ್ಕಾರ ಸಾಕಷ್ಟು ನೀಡುತ್ತಿತ್ತು. ಇದರಿಂದ ಬಡವರ ಕಸುಬಿಗೆ ಉಪಕಾರವಾಗುತ್ತಿತ್ತು. ನನ್ನ ಕ್ಷೇತ್ರದ ನೂರಿನ್ನೂರು ದೋಣಿಗಳಿಗೆ ವರ್ಷವಿಡೀ ಗಂಗೊಳ್ಳಿ ಮೀನುಗಾರಿಕಾ ಸಹಕಾರಿ ಸಂಘದಿಂದ ಸಾಕಷ್ಟು ಎಣ್ಣೆ ದೊರಕುತ್ತಿತ್ತು. ಈ ಸವಲತ್ತು ಇತ್ತೀಚೆಗೆ ರದ್ದು, ಇದರಿಂದಾಗಿ ಬಡ ಮೀನುಗಾರರ ಹೊಟ್ಟೆಗೇ ಗುದ್ದು, ಕಸುಬಿಗೇ ಕುತ್ತು, ಬದುಕಿಗೇ ಆಪತ್ತು, ಅದಕ್ಕಾಗಿ ನನ್ನ ಒತ್ತಾಯ ಈ ಹೊತ್ತು- ಮರಳಿ ಒದಗಿಸಲು ಸದರಿ ಸವಲತ್ತು.

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) : ಮಾನ್ಯ ಉಪಾಧ್ಯಕ್ಷಣೆಯವರೇ,

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಡದೋಣಿಗಳಿಂದ ಮೀನುಗಾರರ ಕಾರ್ಯಚಟುವಟಿಕೆಗಳು ವರ್ಷದಲ್ಲಿ ಆಗಸ್ಟ್ ತಿಂಗಳಿನಿಂದ ನವೆಂಬರ್ ತಿಂಗಳವರೆಗೆ ವ್ಯಾಪಕವಾಗಿ ನಡೆಯುತ್ತದೆ. ಡಿಸೆಂಬರ್ ತಿಂಗಳಿಂದ ಇವರ ಕಾರ್ಯ ಚಟುವಟಿಕೆಗಳು ಅಲ್ಪ ಪ್ರಮಾಣದಲ್ಲಿ ನಡೆಯುತ್ತವೆ. ಜಿಲ್ಲೆಗೆ ಆಗಸ್ಟ್ ತಿಂಗಳಿಂದ ನವೆಂಬರ್ 92 ಮಾಪೆಯವರೆಗೆ ಪ್ರತಿ ತಿಂಗಳೂ 160 ಕಲೋ ಲೀಟರ್ ಸೀಮೆ ಎಣ್ಣೆಯನ್ನು ಮೀನುಗಾರಿಕೆಗೆ ಬಿಡುಗಡೆ ಮಾಡಿದ್ದು ಇದರಲ್ಲಿ 48ಕಿಲೋ ಲೀಟರ್ ಸೀಮೆಎಣ್ಣೆಯನ್ನು ಗಂಗೊಳ್ಳಿ ಮೀನುಗಾರರ ಸಹಕಾರ ಸಂಘಕ್ಕೆ ಮೀನುಗಾರರ ನಾಡದೋಣಿಗಳಿಗೆ ಗೃಹ ಬಳಕೆ ದರದಲ್ಲಿ ಹಂಚಿಕೆ ಮಾಡಲು ನೀಡಿದೆ. ಡಿಸೆಂಬರ್ 92ರಿಂದ ಜಿಲ್ಲೆಗೆ 60ಕಿಲೋ ಲೀಟರ್ ಸೀಮೆಎಣ್ಣೆಯನ್ನು ಮೀನುಗಾರಿಕೆಗೆ ಹಂಚಿಕೆ ಮಾಡಿದ್ದು ಇದರಲ್ಲಿ 36ಕಿಲೋ ಲೀಟರ್ ಸೀಮೆಎಣ್ಣೆಯನ್ನು ಮೀನುಗಾರರ ನಾಡದೋಣಿಗೆ ಹಂಚಲು ಗಂಗೋಳ್ಳಿ ಮೀನುಗಾರರ ಸಹಕಾರ ಸಂಘಕ್ಕೆ ಹಂಚಿಕೆ ಮಾಡಿದೆ. ಡಿಸೆಂಬರ್ 92ರಿಂದ ಮೀನುಗಾರರ ಕಾರ್ಯ ಚಟುವಟಿಕೆಗಳು ಅಲ್ಪ ಪ್ರಮಾಣದಲ್ ನಡೆಯುವುದರಿಂದ ಕಡಿಮೆ ಪ್ರಮಾಣದ ಸೀಮೆಎಣ್ಣೆಯನ್ನು ಬಿಡುಗಡೆ ಮಾಡಲಾಗಿದೆ ವಿನಃ ಪೂರ್ತಿಯಾಗಿ ರದ್ದು ಮಾಡಿರುವುದಿಲ್ಲ.

9. ಶಹಾಪುರ ತಾಲ್ಲೂಕಿಗೆ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಸರಬರಾಜಿಗೆ ಒತ್ತಾಯ

ಶ್ರೀ ಶಿವಶೇಖರಗೌಡ ಶೀರ್ವಾಳ್ : ಮಾನ್ಯ ಉಪಾಧ್ಯಕ್ಷಣೆಯವರೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವವು ಕಳೆದ ಹಲವಾರು ತಿಂಗಳುಗಳಿಂದ ಗುಲ್ಬರ್ಗಾ ಜಿಲ್ಲೆಗೆ ಅದರಲ್ಲೂ ವಿಶೇಷವಾಗಿ ಶಹಾಪುರ ತಾಲ್ಲೂಕಿಗೆ ಟ್ರಾನ್ಸ್‌ಫಾರ್ಮರ್‌ಗಳನ್ನು ಸರಬರಾಜು ಮಾಡಿರುವುದಿಲ್ಲ. ಈಗ ಹೈದರಾಬಾದ್ ಕರ್ನಾಟಕ ಅ ಭಿವೃದ್ಧಿ ಮಂಡಲಿಯವರು ತಾಂಡಾಗಳಿಗೆ ರೈತರಿಗೆ ಹಾಗೂ ನೀರು ಸರಬರಾಜು ಘಟಕಗಳಿಗೆ ವಿದ್ಯುತ್ತೀಕರಣವನ್ನು ಮಂಜೂರ್ಮಾಡಿದ್ದಾಗ್ಯೂ ಟ್ರಾನ್ಸ್‌ಫಾರ್ಮರ್‌ಗಳಿಲ್ಲದಿರುವ ಕಾರಣದಿಂದಾಗಿ ಮಂಜೂರಾಗಿರವ ಕೆಲಸಗಳನ್ನುಕೈಗೊಳ್ಳಲಾಗುತ್ತಿಲ್ಲ. ಇದಲ್ಲದೆ ಈ ಜಿಲ್ಲೆಯಲ್ಲಿ ಎಲ್ಲಿಯಾದರೂ ಟ್ರಾನ್ಸ್‌ಫಾರ್ಮರುಗಳು ಸುಟ್ಟರೆ ವಿದ್ಯುಚ್ಛಕ್ತಿ ಸರಬರಾಜಿಲ್ಲದೆ ರೈತರಿಗೂ ತಾಂಡಾದವರಿಗೂ ಬಹಳ ತೊಂದರೆಯಾಗುತ್ತಿದೆ.